**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ. 121/2021**

ಪ್ರಾ.ಸಾ. 27

ಚಾ.ಸಾ. 40

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 03.11.2025**

| | |
|---|---|
| ಸಾಕ್ಷಿದಾರರ ಹೆಸರು | ಶರತ್.ಎಂ. |
| ತಂದೆಯ ಹೆಸರು | ಮಹೇಶ |
| ವಯಸ್ಸು | 33 ವರ್ಷ |
| ಉದ್ಯೋಗ | ಸಿಪಿಸಿ 361, ಮದ್ದೂರು ಪೊಲೀಸ್ ಠಾಣೆ |
| ವಾಸ | ಮದ್ದೂರು |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ**

.1. ನಾನು 2017 ರಿಂದ ಆಗಸ್ಟ್ 2021 ರವರೆಗೆ ಮದ್ದೂರು ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

.

.2. ಈ ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ನಾನು ತನಿಖಾಧಿಕಾರಿಗೆ ತನಿಖಾ ಸಹಾಯಕನಾಗಿ ಕರ್ತವ್ಯ ನಿರ್ವಹಿಸಿದ್ದೆ. ದಿನಾಂಕ 10.05.2021 ರಂದು ವೃತ್ತ ನಿರೀಕ್ಷಕರು ನನಗೆ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳ ಮತ್ತು ಮಹಜರು ಕಾಲದಲ್ಲಿ ಹಾಜರಿದ್ದು ಮಹಜರನ್ನು ನನ್ನ ಕೈಬರಹದಲ್ಲಿ ಬರೆಯುವಂತೆ ಹಾಗೂ ಕಛೇರಿಗೆ

ನೀಡಿರುವ ಹ್ಯಾಂಡಿ ಕ್ಯಾಮೇರಾದ ಮೂಲಕ ಫೋಟೋಗಳನ್ನು ತೆಗೆಯುವಂತೆ ಸೂಚಿಸಿ ನೇಮಿಸಿದ್ದರು.

.

.3. ಅದರಂತೆ ನಾನು ದಿನಾಂಕ 10.05.2021 ರಂದು ತನಿಖಾಧಿಕಾರಿಗಳ ಜೊತೆಗೆ ಕೃತ್ಯ ಸ್ಥಳಕ್ಕೆ ಹೋಗಿದ್ದೇನೆ. ಕೃತ್ಯ ನಡೆದ ಸ್ಥಳದಲ್ಲಿ ಕೇಸಿನ ಪಿರ್ಯಾದುದಾರರು ತಿಳಿಸಿ ತೋರಿಸಿದ ಸ್ಥಳದಲ್ಲಿ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಸ್ಥಳ ಮಹಜರನ್ನು ಜರುಗಿಸಿದರು. ಸದರಿ ಮಹಜರನ್ನು ತನಿಖಾಧಿಕಾರಿಗಳು ನನಗೆ ಉಕ್ತಲೇಖ ಕೊಟ್ಟರು, ನಾನು ಬರೆದಿರುತ್ತೇನೆ. ಸದರಿ ಮಹಜರನ್ನು ರಾತ್ರಿ 10.10 ರಿಂದ 11.10 ಗಂಟೆವರೆಗೆ ಮಹಜರು ಮಾಡಿದ್ದಾರೆ. ಸದರಿ ಸಮಯದಲ್ಲಿ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಆರೋಪಿಗಳು ಕೃತ್ಯಕ್ಕೆ ಬಳಸಿದ ಒಂದು ಲಾಂಗು, ಎರಡು ಸಿಮೆಂಟ್ ಕಲ್ಲುಗಳು, ಮೃತನ ಬಾಬ್ತು ಒಂದು ಮೋಟಾರು ಸೈಕಲುಗಳನ್ನು ಅಮಾನತ್ತುಪಡಿಸಿಕೊಂಡರು. ಸಾಕ್ಷಿ ನಿಪಿ.2 ಪಂಚನಾಮೆಯನ್ನು ನೋಡಿ ನಾನೇ ಬರೆದಿದ್ದು ಎಂದು ಗುರುತಿಸುತ್ತಾರೆ. ಸಾಕ್ಷಿ ನಿಪಿ.2 ರಲ್ಲಿ ತನ್ನ ಕೈಬರಹವನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.2 ಡಿ ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ಸೋನಿ ಹ್ಯಾಂಡಿ ಕ್ಯಾಮೇರಾದ ಮೂಲಕ ಫೋಟೋ ತೆಗೆದಿದ್ದೇನೆ. ಅವುಗಳನ್ನು ಗುರುತಿಸಬಲ್ಲೆ. ಸಾಕ್ಷಿ ನಿಪಿ.3 ರಿಂದ ನಿಪಿ.14 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಮೃತ ದೇಹ ಅಲ್ಲಿಯೇ ಇತ್ತು. ಬಳಿಕ ತನಿಖಾಧಿಕಾರಿಯವರು ಮೃತ ದೇಹವನ್ನು ಶವ ತನಿಖೆಗೋಸ್ಕರ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದರು.

.

.4. ಬಳಿಕ ಅದೇ ದಿನ ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಕಾರನ್ನು ಕುದುರುಗುಂಡಿಯಿಂದ ಮಲ್ಲಯ್ಯನಗರ ಗ್ರಾಮಕ್ಕೆ ಹೋಗುವ ರಸ್ತೆಯ ಬಳಿ ತನಿಖಾಧಿಕಾರಿಗಳು ಪತ್ತೆ ಹಚ್ಚಿ ಮಹಜರು ಮಾಡಿ ಅಮಾನತ್ತುಪಡಿಸಿದರು. ಸದರಿ ಮಹಜರು ನಿಪಿ.42. ನಿಪಿ.42 ಮಹಜರನ್ನೂ ಕೂಡ ನಾನೇ ಬರೆದಿದ್ದು. ಸಾಕ್ಷಿ ನಿಪಿ.42 ಮಹಜರನ್ನು ನೋಡಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.42 ಬಿ ಎಂದು ಗುರುತಿಸಲಾಯಿತು. ಆ ಕಾಲಕ್ಕೆ

ಕೂಡ ನಾನು ಸೋನಿ ಹ್ಯಾಂಡಿ ಕ್ಯಾಮೇರಾದ ಮೂಲಕ ಫೋಟೋ ತೆಗೆದಿದ್ದೇನೆ. ಸಾಕ್ಷಿ ನಿಪಿ.43 ಮತ್ತು ನಿಪಿ.44 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

.

.5. ನಂತರ ದಿನಾಂಕ 11.05.2021 ರಂದು ಬೆಳಗ್ಗೆ 9.00 ರಿಂದ 11.00 ಗಂಟೆವರೆಗೆ ಮಂಡ್ಯ ಮಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿ ತನಿಖಾಧಿಕಾರಿಗಳು ಶವ ತನಿಖೆ ಮಾಡುವಾಗ ನಾನು ಹಾಜರಿದ್ದೆ. ಅವರು ಸಾಕ್ಷಿಗಳ ಸಮಕ್ಷಮ ಶವ ತನಿಖೆಯನ್ನು ಮಾಡಿ ಅದನ್ನು ನನಗೆ ಉಕ್ತಲೇಖನ ಕೊಟ್ಟು ಬರೆಸಿದ್ದಾರೆ. ಸದರಿ ಶವ ತನಿಖೆ ವರದಿಯನ್ನು ಸಾಕ್ಷಿ ಗುರುತಿಸಿದ್ದು, ಅದು ಈಗಾಗಲೇ ನಿಪಿ.45 ಎಂದು ಗುರುತಿಸಲಾಗಿದೆ. ಆ ಕಾಲಕ್ಕೆ ಕೂಡ ಫೋಟೋ ತೆಗೆದಿದ್ದೇನೆ. ಆ ಕಾಲಕ್ಕೆ ತನಿಖಾಧಿಕಾರಿಗಳು ಮೃತನ ರಕ್ತ ಸಂಬಂಧಿಗಳ ಮತ್ತು ಇತರೆ ಸಾಕ್ಷಿಗಳ ಹೇಳಿಕೆಗಳನ್ನೂ ಕೂಡ ನನಗೆ ಉಕ್ತಲೇಖನ ಕೊಟ್ಟು ಬರೆಸಿದ್ದಾರೆ. ಆ ಕಾಲಕ್ಕೆ ಕೂಡ ಫೋಟೋ ತೆಗೆದಿದ್ದೇನೆ. ಸಾಕ್ಷಿ ಒಟ್ಟು 6 ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ.95 ಎಂದು ಗುರುತಿಸಲಾಯಿತು.

.

.6. ನಂತರ ದಿನಾಂಕ 16.05.2021 ರಂದು ಆರೋಪಿರಾದ ಇಂದುಕುಮಾರ್, ಪ್ರಸಾದ್ ಅಲಿಯಾಸ್ ಪುಟ್ಟ ಮತ್ತು ಸ್ವರೂಪ ರವರಿಂದ ಮದ್ದೂರು ಮುಂಭಾಗದ ಠಾಣಾ ಆವರಣದಲ್ಲಿ ಕೃತ್ಯಕ್ಕೆ ಬಳಸಿದ್ದ ಮೋಟಾರು ಸೈಕಲನ್ನು ಅಮಾನತ್ತುಪಡಿಸುವಾಗ ಹಾಜರು ಇದ್ದೆ. ಮಹಜರು ಕಾಲಕ್ಕೆ ನಾನು ಸೋನಿ ಹ್ಯಾಂಡಿ ಕ್ಯಾಮೇರಾದ ಮೂಲಕ ಫೋಟೋ ತೆಗೆದಿದ್ದೇನೆ. ನಾನು ಮಹಜರನ್ನು ಬರೆದಿಲ್ಲ. ಸಾಕ್ಷಿ ನಿಪಿ.47 ಮತ್ತು ನಿಪಿ.48 ಫೋಟೋಗಳನ್ನು ನೋಡಿ ಸದರಿ ಮಹಜರು ಕಾಲಕ್ಕೆ ನಾನು ತೆಗೆದಿದ್ದು ಎಂದು ನುಡಿಯುತ್ತಾರೆ. ಸದರಿ ಮೂರೂ ಜನ ಆರೋಪಿಗಳನ್ನು ನಾನು ಈಗ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನಾನು ನೋಡಿದ 5 ನೇ ಆರೋಪಿ ಪ್ರಸಾದ್ ಅಲಿಯಾಸ್ ಪುಟ್ಟ ಇಂದು ನ್ಯಾಯಾಲಯದ ಮುಂದೆ ಹಾಜರು ಇಲ್ಲ. ಸ್ವರೂಪ ಆರೋಪಿ ಕೂಡ ಇಂದು ಇಲ್ಲ.

.

.7. ದಿನಾಂಕ 17.05.2021 ರಂದು ಪ್ರಕರಣದ ಆರೋಪಿಗಳಾದ ಮಧು ಅಲಿಯಾಸ್ ಕಪ್ಪೆ ಅವಿನಾಶ್ ಅಲಿಯಾಸ್ ಇಡ್ಲಿ ನಾಗ ಅಲಿಯಾಸ್ ನಾಗರಾಜು ಮತ್ತು ಮಹದೇವ ರವರುಗಳಿಂದ ಪ್ರಕರಣಕ್ಕೆ ಸಂಬಂಧಿಸಿದ ಎರಡು ಮೋಟಾರು ಸೈಕಲುಗಳನ್ನು ಮದ್ದೂರು ಠಾಣಾ ಆವರಣದಲ್ಲಿ ತನಿಖಾಧಿಕಾರಿಗಳು ಅಮಾನತ್ತುಪಡಿಸುವಾಗ ನಾನು ಹಾಜರಿದ್ದೆ. ಆ ಮಹಜರು ಕಾಲಕ್ಕೆ ಕೂಡ ನಾನು ಫೋಟೋ ತೆಗೆದಿದ್ದೇನೆ. ಆ ಫೋಟೋಗಳನ್ನೂ ಕೂಡ ನಾನು ಗುರುತಿಸಬಲ್ಲೆ. ಸಾಕ್ಷಿ ನಿಪಿ.50 ಮತ್ತು ನಿಪಿ.51 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಮಹಜರು ಕಾಲಕ್ಕೆ ಹಾಜರಿದ್ದ ಆರೋಪಿಗಳಾದ ಮಧು ಅಲಿಯಾಸ್ ಕಪ್ಪೆ ಅವಿನಾಶ್ ಅಲಿಯಾಸ್ ಇಡ್ಲಿ ನಾಗ ಅಲಿಯಾಸ್ ನಾಗರಾಜು ಮತ್ತು ಮಹದೇವ ರವರುಗಳನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ನ್ಯಾಯಾಲಯದ ಮುಂದೆ ಮಹದೇವ, ಅವಿನಾಶ್, ನಾಗರಾಜು ಎಂಬ ಆರೋಪಿಗಳು ನ್ಯಾಯಾಲಯದ ಮುಂದೆ ಇದ್ದಾರೆ. 2 ನೇ ಆರೋಪಿ ನ್ಯಾಯಾಲಯದ ಮುಂದೆ ಹಾಜರು ಇಲ್ಲ.

.

.8. ನಂತರ ಅದೇ ದಿನ ತನಿಖಾಧಿಕಾರಿಗಳ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಆರೋಪಿಗಳ ಜೊತೆ ಹೋಗಿದ್ದೇನೆ. ಅಲ್ಲಿ ತನಿಖಾಧಿಕಾರಿಗಳು ಆರೋಪಿಗಳ ಮೂಲಕ ಕೃತ್ಯ ಸ್ಥಳವನ್ನು ಗುರುತಿಸಿ ಮಹಜರು ಮಾಡಿದ್ದಾರೆ. ಆ ಕಾಲಕ್ಕೆ ಕೂಡ ನಾನು ಫೋಟೋಗಳನ್ನು ತೆಗೆದಿದ್ದೇನೆ. ಸಾಕ್ಷಿ ನಿಪಿ.53 ಮತ್ತು ನಿಪಿ.54 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

.

.9. ನಂತರ ಕೃತ್ಯ ನಡೆದ ಸ್ಥಳವನ್ನು ತೋರಿಸಿದ ಆರೋಪಿಗಳು ಕೃತ್ಯಕ್ಕೆ ಸಂಚು ರೂಪಿಸಿದ ಜಾಗವಾದ ಸಾದೊಳಲು ಗ್ರಾಮದ 23 ನೇ ಕಾಲುವೆ ಬಳಿ ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿ ಆರೋಪಿಗಳು ತನಿಖಾಧಿಕಾರಿಗಳಿಗೆ ಸಂಚು ರೂಪಿಸಿದ ಸ್ಥಳವನ್ನು ತೋರಿಸಿದರು. ಅಲ್ಲಿ ಕೂಡ ನಾನು ಫೋಟೋಗಳನ್ನು ತೆಗೆದೆ. ಸಾಕ್ಷಿ ನಿಪಿ.56 ಫೋಟೋವನ್ನು ನೋಡಿ ಗುರುತಿಸಿದ್ದಾರೆ.

.

.10. ದಿನಾಂಕ 18.05.2021 ರಂದು ಕೇಸಿನ ಗಾಯಾಳು ಸುನೀಲ್ ಕುಮಾರ್ ರವರು ಕೃತ್ಯ ಸಮಯದಲ್ಲಿ ತಾನು ಧರಿಸಿದ್ದ ಬಟ್ಟೆಗಳನ್ನು ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಅವರ ಸಮಕ್ಷಮ ತಂದು ಹಾಜರುಪಡಿಸಿದ್ದು, ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅವುಗಳನ್ನು ಅಮಾನತ್ತುಪಡಿಸಿದರು. ಆ ಕಾಲಕ್ಕೆ ನಾನು ಫೋಟೋಗಳನ್ನು ತೆಗೆದಿದ್ದೇನೆ. ಸದರಿ ಫೋಟೋಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.32 ರಿಂದ ನಿಪಿ.35 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ.

.

.11. ನಂತರ ಅದೇ ದಿನ ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ ಲಾಂಗು, ಡ್ರ್ಯಾಗನ್, ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಆರೋಪಿಗಳು ತನಿಖಾಧಿಕಾರಿಗೆ ತೋರಿಸಿಕೊಡುತ್ತೇನೆಂದು ಹೇಳಿ, ಚನ್ನಪಟ್ಟಣ ತಾಲ್ಲೂಕಿನ ಮುದುಗೆರೆ ಗ್ರಾಮದ ಖಾನ್ ಹೋಟೆಲ್ ಹಿಂಭಾಗದ ಒಂದು ರೂಮಿಗೆ ಕರೆದುಕೊಂಡು ಹೋದರು. ಅಲ್ಲದೆ ಕೃತ್ಯ ಸಮಯದಲ್ಲಿ ಬಳಸಿದ್ದ ಮೊಬೈಲ್ ಗಳನ್ನೂ ಕೂಡ ಅಲ್ಲಿಯೇ ಇಟ್ಟಿದ್ದಾಗಿ ಹೇಳಿದರು. ಅಲ್ಲಿ ಆರೋಪಿಗಳು ತನಿಖಾಧಿಕಾರಿಗಳಿಗೆ ಬಚ್ಚಿಟ್ಟಿದ್ದ ಒಂದು ಲಾಂಗು, ಒಂದು ಡ್ರ್ಯಾಗನ್, ಬಟ್ಟೆಗಳು ಮತ್ತು ಮೊಬೈಲುಗಳನ್ನು ತೋರಿಸಿ ಎತ್ತಿಕೊಟ್ಟರು. ಆಗ ಪಂಚರ ಸಮಕ್ಷಮ ತನಿಖಾಧಿಕಾರಿಗಳು ಮಹಜರು ಮಾಡಿದರು. ಆಗ ನಾನು ಹಾಜರಿದ್ದು, ಫೋಟೋ ತೆಗೆದಿದ್ದೇನೆ. ಸಾಕ್ಷಿ ನಿಪಿ.58 ರಿಂದ ನಿಪಿ.79 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಎಲ್ಲಾ ಫೋಟೋಗಳನ್ನು ನಾನು ನಮ್ಮ ಇಲಾಖೆಯ ಸೋನಿ ಹ್ಯಾಂಡಿ ಕ್ಯಾಮೇರಾದ ಮೂಲಕ ತೆಗೆದಿದ್ದೇನೆ. ಆ ಕಾಲಕ್ಕೆ ಕ್ಯಾಮೇರಾ ಸುಸ್ಥಿತಿಯಲ್ಲಿತ್ತು. ಸದರಿ ಫೋಟೋಗಳನ್ನು ನಾನು ತನಿಖಾಧಿಕಾರಿಗಳು ಮತ್ತು ಹಾಜರಿದ್ದ ಆರೋಪಿಗಳು, ಪಂಚರು ಮತ್ತು ನಮ್ಮ ಸಿಬ್ಬಂದಿಗಳಿಗೆ ಅಭಿಮುಖವಾಗಿ ತೆಗೆದಿದ್ದೇನೆ. ಆದ್ದರಿಂದ ಫೋಟೋದಲ್ಲಿ ನಾನು ಕಾಣುತ್ತಿಲ್ಲ.

.

.12. ಈ ಎಲ್ಲಾ ಮಹಜರುಗಳ ಕಾಲಕ್ಕೆ ನಾನು ತೆಗೆದ ಫೋಟೋಗಳನ್ನು ನಮ್ಮ ಠಾಣಾ ಬಳಿಯ ನಿಖಿಲ್ ಸ್ಟುಡಿಯೋ ಬಳಿಗೆ ಹೋಗಿ ಅಲ್ಲಿ ಹ್ಯಾಂಡಿ

ಕ್ಯಾಮೇರಾದಲ್ಲಿ ಶೇಖರಿಸಿದ್ದ ಫೋಟೋಗಳನ್ನು ಡಾಟಾ ಕೇಬಲ್ ಮೂಲಕ ನನ್ನ ಸಮಕ್ಷಮ ಯಥಾವತ್ತಾಗಿ ಸ್ಟುಡಿಯೋದ ಸಿಬ್ಬಂದಿ ಡೌನ್ ಲೋಡ್ ಮಾಡಿ ಪ್ರಿಂಟ್ ತೆಗೆದರು. ಸದರಿ ಪ್ರಿಂಟ್ ತೆಗೆದ ಫೋಟೋಗಳನ್ನು ನಾನು ತನಿಖಾಧಿಕಾರಿಗಳಿಗೆ ನೀಡಿದ್ದೇನೆ. ಅಲ್ಲದೆ ಕ್ಯಾಮೇರಾದಲ್ಲಿ ಶೇಖರಿಸಲ್ಪಟ್ಟ ಫೋಟೋಗಳನ್ನು ಡಿವಿಡಿಗೆ ಡೌನ್ ಲೋಡ್ ಮಾಡಿಸಿಕೊಂಡು ಅದನ್ನೂ ಕೂಡ ತನಿಖಾಧಿಕಾರಿಗಳಿಗೆ ನೀಡಿದ್ದೇನೆ.

.

.13. ದಿನಾಂಕ 19.05.2021 ರಂದು ನಾನು ಫೋಟೋ ತೆಗೆದು ಸ್ಟುಡಿಯೋದವರ ಮೂಲಕ ಪ್ರಿಂಟ್ ತೆಗೆಸಿ ಮತ್ತು ಡಿವಿಡಿಗೆ ಡೌನ್ ಲೋಡ್ ಮಾಡಿದ ಬಗ್ಗೆ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಪ್ರಕಾರ ಪ್ರಮಾಣ ಪತ್ರವನ್ನು ತನಿಖಾಧಿಕಾರಿಗಳಿಗೆ ನೀಡಿದ್ದೇನೆ, ಅದನ್ನು ಗುರುತಿಸಬಲ್ಲೆ. ಸಾಕ್ಷಿ ದಿನಾಂಕ 19.05.2021ರ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ.96 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.96ಎ ಎಂದು ಗುರುತಿಸಲಾಯಿತು. ನಾನು ನ್ಯಾಯಾಲಯದ ಮುಂದೆ ಸದರಿ ಫೋಟೋಗಳನ್ನು ನೋಡಿದಾಗ ಆ ದಿನ ನಾನು ಮಹಜರುಗಳ ಕಾಲಕ್ಕೆ ಫೋಟೋ ತೆಗೆದು ಪ್ರಿಂಟ್ ಹಾಕಿಸಿದ ಫೋಟೋಗಳೇ ಆಗಿವೆ. ನಾನು ಡಿವಿಡಿಯಲ್ಲಿ ಹಾಕಿ ತನಿಖಾಧಿಕಾರಿಗಳಿಗೆ ನೀಡಿದ ಸಿಡಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.39 ಸಿಡಿಯನ್ನು ನೋಡಿ ಇದರಲ್ಲಿ ನಾನು ತನಿಖಾ ಕಾಲಕ್ಕೆ ತನಿಖಾಧಿಕಾರಿಗಳ ನಿರ್ದೇಶನದಂತೆ ತೆಗೆದ ಫೋಟೋಗಳು ಇವೆ ಎಂದು ನುಡಿಯುತ್ತಾರೆ. ಸದರಿ ಸಿಡಿಯನ್ನು ನ್ಯಾಯಾಲಯದ ಗಣಕಯಂತ್ರಕ್ಕೆ ಅಳವಡಿಸಿ ಸಿಡಿಯ ಒಳಗೆ ಇರುವ ಫೋಟೋಗಳಲ್ಲಿ ಸಾಕ್ಷಿ ನಿಪಿ.3 ರಿಂದ ನಿಪಿ.14, ನಿಪಿ.15 ರಿಂದ ನಿಪಿ.29, ನಿಪಿ.32 ರಿಂದ ನಿಪಿ.35, ನಿಪಿ.43, ನಿಪಿ.44, ನಿಪಿ.47, ನಿಪಿ.48, ನಿಪಿ.50, ನಿಪಿ.51, ನಿಪಿ.53, ನಿಪಿ.56, ನಿಪಿ.58 ರಿಂದ ನಿಪಿ.79 ಫೋಟೋಗಳನ್ನು ನೋಡಿ ಸದರಿ ನಿಪಿ.39ರಲ್ಲಿ ಕಾಣುವ ಈ ಫೋಟೋಗಳನ್ನು ನಾನೇ ತೆಗೆದಿದ್ದು ಎಂದು ನುಡಿಯುತ್ತಾರೆ. ನಿಪಿ.2 ಮಹಜರು ಕಾಲಕ್ಕೆ ತನಿಖಾಧಿಕಾರಿಗಳು ಅಮಾನತ್ತುಪಡಿಸಿದ ಮು.ಮಾ.1 ರಿಂದ ಮು.ಮಾ.3 ಅನ್ನು ಗುರುತಿಸಬಲ್ಲೆ. ಸಾಕ್ಷಿ ಮು.ಮಾ.1

ಒಂದು ಲಾಂಗು, ಮು.ಮಾ.2 ಸಿಮೆಂಟ್ ದಿಂಡು ಕಲ್ಲುಗಳನ್ನು ನೋಡಿ ಗುರುತಿಸಿರುತ್ತಾರೆ. ಸ್ಥಳದಲ್ಲಿ ಬಿದ್ದಿದ್ದ ಮೋಟಾರು ಬೈಕನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.10, ನಿಪಿ.11 ಮತ್ತು ನಿಪಿ.12 ರಲ್ಲಿ ಕಂಡು ಬರುವ ಮೋಟಾರು ಬೈಕುಗಳನ್ನು ನೋಡಿ ಗುರುತಿಸಿರುತ್ತಾರೆ. ತನಿಖಾಧಿಕಾರಿಗಳು ನಿಪಿ.42 ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿದ ಕಾರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.43, ನಿಪಿ.44 ಫೋಟೋಗಳಲ್ಲಿ ಕಂಡು ಬರುವ ಕಾರನ್ನು ನೋಡಿ ಗುರುತಿಸಿರುತ್ತಾರೆ. ಅಲ್ಲದೆ ಠಾಣಾ ಮುಂಭಾಗದಲ್ಲಿ ಆರೋಪಿತರಿಂದ ಗುರುತಿಸಿ ಅಮಾನತ್ತುಪಡಿಸಿದ ಮೋಟಾರು ಸೈಕಲನ್ನು ಗುರುತಿಸಬಲ್ಲೆ. ಸಾಕ್ಷಿ ನಿಪಿ.47 ಮತ್ತು ನಿಪಿ.48 ರಲ್ಲಿ ಕಂಡು ಬರುವ ಮೋಟಾರು ಸೈಕಲನ್ನು ಗುರುತಿಸಿರುತ್ತಾರೆ.

.

.14. ದಿನಾಂಕ 17.05.2021 ರಂದು ತನಿಖಾಧಿಕಾರಿಗಳು ಮದ್ದೂರು ಠಾಣಾ ಆವರಣದಲ್ಲಿ ಅಮಾನತ್ತುಪಡಿಸಿದ ಎರಡು ಬೈಕುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನಿಪಿ.50 ಮತ್ತು ನಿಪಿ.51 ಫೋಟೋಗಳಲ್ಲಿ ಕಂಡು ಬರುವ ಎರಡು ಬೈಕುಗಳನ್ನು ನೋಡಿ ಗುರುತಿಸಿರುತ್ತಾರೆ. ನಿಪಿ.57 ಪಂಚನಾಮೆಯಡಿಯಲ್ಲಿ ತನಿಖಾಧಿಕಾರಿಗಳು ಅಮಾನತ್ತುಪಡಿಸಿದ ಒಂದು ಲಾಂಗು, ಡ್ರ್ಯಾಗರ್, ಆರೋಪಿತರು ಕೃತ್ಯ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಮತ್ತು ಮೊಬೈಲುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಮು.ಮಾ.22 ಡ್ರ್ಯಾಗರ್, ಮು.ಮಾ.21 ಲಾಂಗು, ಮು.ಮಾ.13 ಜೀನ್ಸ್ ಪ್ಯಾಂಟು, ಮು.ಮಾ.19 ನೀಲಿ ಹೂವುಗಳಿರುವ ಶರ್ಟ್, ಮು.ಮಾ.11 ಟೀ ಶರ್ಟ್, ಮು.ಮಾ.12 ಬನಿಯನ್, ಮು.ಮಾ.18 ಕಪ್ಪು ಬಣ್ಣದ ಟೀ ಶರ್ಟ್, ಮು.ಮಾ.14 ನೀಲಿ ಬಣ್ಣದ ನೈಟ್ ಪ್ಯಾಂಟು, ಮು.ಮಾ.20 ಕಡುನೀಲಿ ಬಣ್ಣದ ಜೀನ್ಸ್ ಪ್ಯಾಂಟು, ಮು.ಮಾ.16 ಬೂದು ಬಣ್ಣದ ಟೀ ಶರ್ಟ್, ಮು.ಮಾ.15 ಟೀ ಶರ್ಟ್, ಮು.ಮಾ.17 ಟೀ ಶರ್ಟ್ ಗಳನ್ನು ನೋಡಿ ಗುರುತಿಸಿರುತ್ತಾರೆ.

.

.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಆರ್ ವಿ ವಕೀಲರಿಂದಃ</u>**

ಪಾಟೀ ಸವಾಲಿಗೆ ಆರೋಪಿಗಳ ಪರ ವಕೀಲರು ಕಾಲಾವಕಾಶ ಕೇಳಿರುತ್ತಾರೆ, ಯಾವುದೇ ಸಃಕಾರಣಗಳು ಇಲ್ಲದೇ ಇರುವ ಕಾರಣ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.